

ಗಾಂಧಿ ಜಯಂತಿ ದೃಶ್ಯ

# ರಂಗದ ಮೇಲೆ ಪುಟಿದ ಸ್ವಾತಂತ್ರ್ಯದ ಅಂತರ್ಜಲ

**ಇಂಗ್ಲೆಂಡ್ ರಾಣಿಯ ವಸಾಹತು ಆಡಳಿತದ ವಿರುದ್ಧ ತಿರುಗಿಬಿದ್ದ ಸ್ವಾತಂತ್ರ್ಯದ ಸೇನಾನಿಗಳು ರಾಷ್ಟ್ರೀಯತೆಯ ರೂಪುರೇಷೆಗೆ ಜೀವ ತುಂಬಿದರು. ಸರ್ಕಾರದ ನಿರ್ಬಂಧ ನಿಯಂತ್ರಣಗಳಿಗೆ ತಿರುಮಂತ್ರವನ್ನು ಹಾಕಿದ ಅವರು ಕಲೆಯನ್ನು ತಮ್ಮ ಹೋರಾಟದ ಭಿತ್ತಿಯನ್ನಾಗಿ ಮಾಡಿಕೊಂಡರು. ಸ್ವಾತಂತ್ರ್ಯ ಪಡೆಯಲು ಹಳ್ಳಿಯ ಸಾಮಾನ್ಯ ಮಹಿಳೆಯೂ ಟೊಂಕಕಟ್ಟಿ ನಿಂತ ಚರಿತ್ರೆಗೆ ಇಲ್ಲಿನ ಹರಿಕತೆ ಲಾವಣಿಯಷ್ಟೇ ರಂಗಭೂಮಿಯೂ ಪಾತ್ರ ವಹಿಸಿದೆ.**

■ ರಾಘವೇಂದ್ರ ಕೆ. ತೊಗರ್ಸಿ

ದಮನಕಾರಿ ಬ್ರಿಟಿಷ್ ಸರ್ಕಾರದ ನಿರ್ಬಂಧ ನಿಯಂತ್ರಣದ ನಡುವೆ ಹೊಸ ಹೊಸ ರೂಪದಲ್ಲಿ ಜನಜಾಗೃತಿಯ ಮಾರ್ಗಗಳನ್ನು ಭಾರತೀಯರು ಕಂಡುಕೊಂಡರು. ಹಾಡು–ಕುಣಿತಗಳ ಜೊತೆ ಜೊತೆ ಲಾವಣಿ, ಹರಿಕತೆ, ನಾಟಕಗಳ ಮೂಲಕವೂ ದಾಸ್ಯದಿಂದ ವಿಮೋಚಿತರಾಗಲು ಹುರಿದುಂಬಿಸಿದರು. ಸ್ವರಾಜ್ಯದ ಕನಸು ಅಂತಃಪ್ರವಾಹ ಪ್ರವಹಿಸಿದಂತೆ ಹೋರಾಟದ ದಿಕ್ಕು ಬೇರೆ ಬೇರೆ ಆಯಾಮಗಳಲ್ಲಿ ಅನಾವರಣಗೊಂಡಿತು. ಸಿಪಾಯಿದಂಗೆ ಎನ್ನುವ ಮೊದಲ ಸ್ವಾತಂತ್ರ್ಯ ಸಂಗ್ರಾಮದ ತರುವಾಯ 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಉದಯವಾಯಿತು. ಅದು ಸಂಧಾನ, ಸುಧಾರಣೆ, ಮಾತುಕತೆಯ ಮೂಲಕ ಸಾರ್ವಭೌಮ ಭಾರತವನ್ನು ನಿರ್ಮಿಸಲು ಶ್ರಮಿಸಿತು. ಅದಕ್ಕೆ ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಸುರೇಂದ್ರನಾಥ್ ಬ್ಯಾನರ್ಜಿ ಮೊದಲಾದವರ ನಾಯಕತ್ವ ದೊರೆತು ರಾಷ್ಟ್ರೀಯ ಹೋರಾಟದ ನೀಲನಕ್ಷೆ ರೂಪು ಪಡೆಯಿತು.

ಒಡೆದಾಳುವ ಬ್ರಿಟಿಷರ ದಮನಕಾರಿ ನೀತಿಯನ್ನು ಮೆಟ್ಟಿ ನಿಲ್ಲಲು ಮೃಧು ಧೋರಣೆ ಸಲ್ಲದು. ಬ್ರಿಟಿಷರ ದರ್ಪ, ದೌರ್ಜನ್ಯವನ್ನು ಉಗ್ರವಾಗಿ ಎದುರಿಸಿದರೆ ಮಾತ್ರ ಜಯ ನಮ್ಮದು ಎನ್ನುವ ಧೋರಣೆಗೆ ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ ಅವರಂತಹ ನಾಯಕರು ಜೀವ ತುಂಬಿದರು. ಆನಂತರ ಸ್ವದೇಶಿ ಆಂದೋಲನಕ್ಕೆ ಶಾಂತಿಯೇ ಮಂತ್ರ, ಅದುವೇ ಶಕ್ತಿ ಎಂದು ಯುಗಪ್ರವರ್ತಕನಂತೆ ದಂಡ ಹಿಡಿದ ನೇತಾರ ಮಹಾತ್ಮ ಗಾಂಧೀಜಿ ಬಂದು ನಿಂತರು. ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಚಳವಳಿ ಮತ್ತಷ್ಟು ಬಲಗೊಳ್ಳುತ್ತಾ ತನ್ನ ಸ್ಪಷ್ಟ ಗುರಿಯನ್ನು ಪಡೆದುಕೊಂಡಿತು. ಅಹಿಂಸಾತ್ಮಕವಾಗಿ ನಡೆದ ನಿರಂತರ ಚಳವಳಿ ಸತ್ಯಾಗ್ರಹಗಳೇ ಬ್ರಿಟಿಷ್ ಆಡಳಿತವನ್ನು ಇಲ್ಲಿಂದ ಓಡಿಸಲು ಕಾರಣವಾಯಿತು. ಈ ಎಲ್ಲ ರಾಷ್ಟ್ರೀಯ ಚಳವಳಿ ಮತ್ತು ಹೋರಾಟಕ್ಕೆ ಊರುಗೋಲಾಗಿ ನಿಂತ ರಂಗಭೂಮಿ ಸ್ವಾತಂತ್ರ್ಯೋತ್ತರ ಈ ಕ್ಷಣದವರೆಗೂ ರಾಷ್ಟ್ರೀಯ ವಿವೇಕವನ್ನು ತುಂಬುತ್ತಿದೆ. ಈಗಲೂ ಒಂದಲ್ಲ ಒಂದು ನಾಟಕ ರಂಗದ ಮೇಲೆ ಸ್ವದೇಶ, ಸ್ವರಾಜ್ಯ, ಸಾರ್ವಭೌಮತ್ವದ ಬಗ್ಗೆ ಹೇಳುತ್ತಲೇ ಇರುತ್ತದೆ.

## ನೆಲಮುಗಿಲಲಿ ಒಂದಾದ ಮಹಾತ್ಮ

ಬೆಳಗಾವಿ ಜಿಲ್ಲೆ ಸವದತ್ತಿಯ ಝುಕೀರ ನದಾಫ ‘ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆ’ ಮೂಲಕ ರಂಗ ಚಟುವಟಿಕೆಯನ್ನು ಮಾಡುತ್ತಿದ್ದಾರೆ. ಅವರ ‘ನೆಲಮುಗಿಲು’ ನಾಟಕವನ್ನು ಬರೆದು, ನಿರ್ದೇಶಿಸಿದ್ದಾರೆ. ಅದರ ಅಂತರಾತ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಯಾರೆಲ್ಲರ ತ್ಯಾಗ ಇದೆ ಎನ್ನುವುದನ್ನು ಬಿಂಬಿಸುತ್ತದೆ. ಜೊತೆಗೆ ಮಹಾತ್ಮ ಗಾಂಧೀಜಿ ಮೇಲೆ ಈಗಲೂ ನಡೆಯುತ್ತಿರುವ ನಿಂದನೆಯ ದಾಳಿಗೆ ಪ್ರತ್ಯುತ್ತರವನ್ನು ನೀಡುತ್ತಿದೆ. ಮಹಾತ್ಮರ ಹೋರಾಟ ಅವರ ನಿಲುವು ಏನಿತ್ತು ಎನ್ನುವುದನ್ನು ಅನುಸಂಧಾನ ಮಾಡುವ ಜೊತೆಗೆ ಸಾಮರಸ್ಯದ ಬದುಕಿಗೆ